ದಿನಾಂಕಃ 12.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀಸವಾಲುಃ ವಾದಿ ಪರ ಶ್ರೀ.ಬಿ. ಕೆ.ಜೆ ವಕೀಲರಿಂದಃ</u>**

ನಿಡಿ.2 ರ ವರದಿ ನಕಲನ್ನು ಹಾಜರುಪಡಿಸಿಲ್ಲ ಎಂದರೆ ನಿಜ. ನಿಡಿ15 ರಂತೆ ಹಾಜರುಪಡಿಸಿದ ಪೀಟಿ ಶೀಟ ತಯಾರಿಸುವ ಕಾಲಕ್ಕೆ ವಾದಿ ಹಾಜರು ಇದ್ದನು ಎಂದು ಆತನ ಸಹಿ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ.15 ರಲ್ಲಿ ಆತನ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ15 ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ಎಸಿ, ಬೈಲಹೊಂಗಲರವರು ಮಾಲ್ಕಿ ಹಕ್ಕಿಗೆ ಸಂಬಂಧಿಸಿದಂತೆ ಪ್ರಕರಣವಾಗಿದ್ದು, ಸಿವಿಲ್ ನ್ಯಾಯಾಲಯದಲ್ಲಿ ವ್ಯಾಜ್ಯವನ್ನು ಇತ್ಯರ್ಥಪಡಿಸಿಕೊಳ್ಳುವಂತೆ ಆದೇಶಿಸಿರುತ್ತಾರೆಂದರೆ ಸರಿಯಲ್ಲ. ವರದಿ ಆಧಾರದ ಮೇರೆಗೆ ದಾವಾಸ್ತಿಯಲ್ಲಿ ನಮ್ಮ ಹೆಸರು ದಾಖಲು ಆಗಿರುತ್ತದೆಂದರೆ ನಿಜ.

ನಿಡಿ36 ರಂತೆ ಹಾಜರುಪಡಿಸಿರುವ ದಾಖಲೆಯಲ್ಲಿ ಸರ್ವೆ ನಂಬರನ್ನು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾವು ದಾವಾಸ್ತಿಯ ಕಬ್ಜೆಯಲ್ಲಿ ಇರುತ್ತೇವೆ ಎಂದು ತೋರಿಸಲು ಕಬ್ಜಾ ಪಾವತಿ ರಸೀದಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ಅನಕ್ಷರಸ್ಥೆಯ ಪ್ರಯೋಜನ ಪಡೆದುಕೊಂಡು ಅವನಿಗೆ ಗೊತ್ತಾಗದ ಹಾಗೆ ದಾವಾಸ್ತಿಗೆ ಸಂಬಂಧಿಸಿದಂತೆ ಸುಳ್ಳು ಡೈರಿಯನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಡೈರಿ ನಂಬರ 4675 ಸರಿ ಆಗಿರುವುದಿಲ್ಲ ಎಂದು ಬೇರೆ ಪಾಲು ವಾಟ್ನಿ ದಾವೆ ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾವು ಯಾವುದೇ ಪಾಲು ವಾಟ್ನಿ ದಾವೆ ಸಲ್ಲಿಸಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಗೆ ಕೇವಲ ಇಬ್ಬರು ಹೆಣ್ಣುಮಕ್ಕಳು ಇದ್ದು, ಅವರ ಆಸ್ತಿಯನ್ನು ಹೇಗಾದರೂ ಮಾಡಿ

ಹೊಡೆಯಬೇಕೆಂಬ ಉದ್ದೇಶದಿಂದ ಸುಳ್ಳು ಡೈರಿಯನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಾಮಾನ್ಯವಾಗಿ ಬ್ಯಾಂಕಿನಿಂದ ಸಾಲ ಪಡೆಯುವಾಗ ವಕೀಲರಿಂದ ಕಾನೂನು ಅಭಿಪ್ರಾಯ ಪಡೆಯುತ್ತಾರೆಂದರೆ ನಿಜ. ದಾವಾಸ್ತಿಯ ಮೇಲೆ ಸಾಲ ಪಡೆಯುವ ಕಾಲಕ್ಕೆ ನಾವು ದಾವಾಸ್ತಿಯ ಮಾಲೀಕರಾಗಿರುತ್ತೇವೆ ಎಂದು ಕಾನೂನು ಅಭಿಪ್ರಾಯ ಪಡೆದುಕೊಂಡು ಸಾಲ ಪಡೆದಿರುತ್ತೇವೆ. ಆ ಬಗ್ಗೆ ದಾಖಲೆಗಳನ್ನು
ಹಾಜರುಪಡಿಸಿದ್ದೇನೆ. ಸಾಮಾನ್ಯವಾಗಿ ಪಹಣಿಪತ್ರಿಕೆಯಲ್ಲಿ ಯಾರ ಹೆಸರು ಮಾಲೀಕರು ಇರುತ್ತಾರೆಂದು ದಾಖಲಾಗಿರುತ್ತದೆಯೋ ಅವರಿಗೆ ಬ್ಯಾಂಕಿನವರು ಸಾಲ ಮಂಜೂರು ಮಾಡುತ್ತಾರೆಂದರೆ ಸಾಕ್ಷಿಯು ಕಬ್ಜೆಯಲ್ಲಿದ್ದವರಿಗೆ ಸಾಲ ಕೊಡುತ್ತಾರೆಂದು ನುಡಿಯುತ್ತಾರೆ.

ಸಾಲ ಮಂಜೂರು ಮಾಡುವ ಕಾಲಕ್ಕೆ ಬಂದಿದ್ದ ಬ್ಯಾಂಕ ಅಧಿಕಾರಿಗಳ ಹೆಸರುಗಳನ್ನು ನನಗೆ ಹೇಳಲು ಆಗುವುದಿಲ್ಲ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸನ್ 2019 ರಲ್ಲಿ ವಾದಿಯ ಕಬ್ಜೆಗೆ ನಾವು ಹರಕತ್ತು ಮಾಡಲು ಪ್ರಾರಂಭಿಸಿದ್ದರಿಂದ ವಾದಿಯು ಪ್ರಸ್ತುತ ದಾವೆಯನ್ನು ನಮ್ಮ ಮೇಲೆ ಹೂಡಿರುತ್ತಾನೆಂದರೆ ಸರಿಯಲ್ಲ. ದಾವಾಸ್ತಿಗೆ ಸಂಬಂಧಿಸಿದಂತೆ ವಾಟ್ನಿಯಾದಾಗಿನಿಂದ ವಾದಿಯೇ ಕಬ್ಜೆ ವಹಿವಾಟಿಯಲ್ಲಿದ್ದು, ನಾವು ಯಾವ ಕಾಲಕ್ಕೂ ಕಬ್ಜಾ ವಹಿವಾಟಿಯಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ಸನ್ 2003-04 ರಿಂದ ನಾವೇ ಕಬ್ಜಾ ವಹಿವಾಟಿಯಲ್ಲಿರುತ್ತೇವೆ ಎಂದು ನುಡಿಯುತ್ತಾರೆ. ಸನ್ 2003-

04 ರಿಂದ ನಾವೇ ಕಬ್ಜೆಯಲ್ಲಿರುತ್ತೇವೆ ಎಂದು ತೋರಿಸಲು ಕಂದಾಯ ಪಾವತಿ ರಸೀದಿಗಳನ್ನಾಗಲೀ, ಕಬ್ಬು ಕಾರ್ಖಾನೆಗೆ ಪೂರೈಸಿದ ಬಗ್ಗೆ ರಸೀದಿಗಳನ್ನಾಗಲೀ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ತೀರಿಕೊಂಡ ನಂತರ ವಾರಸಾ ಮಾಡಿಕೊಳ್ಳುವ ಕಾಲಕ್ಕೆ ವಾದಿಗೆ ನೋಟೀಸು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾಸ್ತಿಗೆ ನಾವು ಯಾವುದೇ ರೀತಿ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸಂಪೂರ್ಣವಾಗಿ ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

Sd/-

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ